ಅಡಿಕೆ ಮತ್ತು ತೆಂಗು ಬೆಲೆ ನಿಯಂತ್ರಣ.

4208(4326) ಶ್ರೀ ಕೆ. ಪ್ರಭಾಕರ ಬಂಗೇರ (ಬೆಳ್ತಂಗಡಿ) :— ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಅಡಿಕೆ ಮತ್ತು ತೆಂಗಳು ಬೆಲೆ ನಿಯಂತ್ರಣಕ್ಕಾಗಿ ಸರ್ಕಾರವು ಯಾವ ಕ್ರಮ ಕೈಗೊಂಡಿದೆ?

ಆ) ಹಾಗಿಲ್ಲದಿದ್ದಲ್ಲಿ ಬೆಲೆ ನಿಯಂತ್ರಣ ಕುರಿತಾದ ಕ್ರಮ ಮತ್ತು ಯೋಜನೆಗಳು ಸರ್ಕಾರದ ಮುಂದಿದೆಯೇ?

ಇ) ಹಾಗಿದ್ದಲ್ಲಿ ಅದರ ವಿವರಗಳೇನು?

ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕೆ ರಾಜ್ಯ ಸಚಿವರು) :—

ಅ) ಅಡಿಕೆಯ ಆಮದನ್ನು ಮುಕ್ತವಾಗಿ (ಓ.ಜಿ.ಎಲ್.ಅಡಿಯಲ್ಲಿ) ಮಾಡಿಕೊಳ್ಳಲು ಇರುವ ಅವಕಾಶವನ್ನು ತಿದ್ದುಪಡಿ ಮಾಡಿ ಅಡಿಕೆಯ ಆಮದನ್ನು ಕ್ಯಾನ್‌ಲೈಸ್ ಮಾಡಲು ಭಾರತ ಸರ್ಕಾರವನ್ನು ವಿನಂತಿಸಿದೆ. ತೆಂಗು ಮತ್ತು ತೆಂಗಿನ ಉತ್ಪನ್ನಗಳ ಆಮದು ರದ್ದುಪಡಿಸಲು ಭಾರತ ಸರ್ಕಾರವನ್ನು ಕೋರಲಾಗಿದೆ.

ಆಮದು ಮಾಡಿಕೊಳ್ಳುತ್ತಿರುವ ಖಾದ್ಯ ತೈಲಗಳ ಮೇಲೆ ಮದು ಶುಲ್ಕ ಹೆಚ್ಚಿಸಿ ಆಮದಾಗುವನ್ನು ಕಡಿಮೆ ಮಾಡಲು ಭಾರತ ಸರ್ಕಾರವನ್ನು ಕೋರಲಾಗಿದೆ.

ಆ) ಮೇಲೆ ವಿವರಿಸಿದಂತೆ.

ಇ) ಮೇಲೆ ವಿವರಿಸಿದಂತೆ.

ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ ನಿರ್ಮಾಣ

4204(4327)ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಧರ್ಮಸ್ಥಳದಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಕಾಮಗಾರಿಯ ಯೋಜನೆಯ ವಿವರಗಳೇನು;

ಆ) ಸದರಿ ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು;

ಇ) ಕಾಮಗಾರಿಗಾಗಿ ಮಂಜೂರು ಮಾಡಿರುವ ಹಣದ ಮೊತ್ತವೆಷ್ಟು?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :—

ಅ) ಧರ್ಮಸ್ಥಳದಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ ನಿರ್ಮಾಣಕ್ಕಾಗಿ ಸರ್ವೆ ನಂ. 156-1ಎ ರಲ್ಲಿ 7.5 ಎಕರೆ ಜಮೀನನ್ನು ದಿನಾಂಕ: 26-04-2000ರಂದು ಸಾರಿಗೆ ನಿಗಮದ ವಶಕ್ಕೆ ಪಡೆದುಕೊಳ್ಳಲಾಗಿದೆ. ನಿವೇಶನವನ್ನು ಸಮ ಮಾಡಲು ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ರವರಿಂದ ಪ್ರೊಫಾರ್ಮ ಇನ್‌ವಾಯಸ್ ಪಡೆದುಕೊಳ್ಳಲಾಗಿದೆ. ಈ ನಿವೇಶನದಲ್ಲಿ ಸುಸಜ್ಜಿತವಾದ ಬಸ್ ನಿಲ್ದಾಣ ನಿರ್ಮಿಸಲು ವಾಸ್ತುಶಿಲ್ಪಿಗಳಿಂದ ನಕ್ಷೆ ಮತ್ತು ವಿನ್ಯಾಸಗಳನ್ನು ತಯಾರಿಸಲು ಕೊಟೇಷನ್‌ಗಳನ್ನು ಪಡೆದುಕೊಳ್ಳಲಾಗಿದೆ. ಈ ಬಗ್ಗೆ ಅಂತಿಮ ತೀರ್ಮಾನ ಕೈಗೊಂಡು ಯೋಜನೆಗೆ ವಿವರವಾದ ಅಂದಾಜು ಪಟ್ಟಿಗಳನ್ನು ಸಿದ್ಧಪಡಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಆ) ಮೇಲೆ ಹೇಳಿದ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ ನಂತರ ಸಂಸ್ಥೆಯ ಆರ್ಥಿಕ ಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಇ) ಹಣ ಮಂಜೂರು ಮಾಡಿರುವುದಿಲ್ಲ.

ಕೃಷಿ ಸಹಾಯಕರ ಖಾಲಿ ಹುದ್ದೆಗಳನ್ನು ತುಂಬುವುದು.

4205 (4328) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) :— ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಳ್ತಂಗಡಿ ತಾಲ್ಲೂಕಿಗೆ ಮಂಜೂರಾಗಿರುವ ಒಟ್ಟು ಕೃಷಿ ಸಹಾಯಕರ ಹುದ್ದೆಗಳ ಸಂಖ್ಯೆ ಎಷ್ಟು? ಅವುಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು?

ಆ) ಪ್ರತೀ ಗ್ರಾಮ ಪಂಚಾಯತಿಗೂ ಒಬ್ಬ ಕೃಷಿ ಸಹಾಯಕರಿರಬೇಕೆಂದು ಸರ್ಕಾರಿ ಆದೇಶ ಜಾರಿಯಲ್ಲಿದ್ದರೂ ಕೊರತೆಗೆ ಕಾರಣಗಳೇನು?

ಇ) ಖಾಲಿ ಇರುವ ಕೃಷಿ ಸಹಾಯಕರಹುದ್ದೆಗಳನ್ನು ತುಂಬಲು ಸರ್ಕಾರ ತೆಗೆದುಕೊಳ್ಳಲಿರುವ ಕ್ರಮಗಳೇನು?

ಶ್ರೀ ಟಿ.ಬಿ. ಜಯಚಂದ್ರ (ಕೃಷಿ ಸಚಿವರು) :—

ಅ)	ಹುದ್ದೆಗಳು ಮಂಜೂರು	12
	ಭರ್ತಿ	07
	ಖಾಲಿ	05